ಶ್ರೀ ಬಿ. ಡಿ. ಜತ್ತಿ.—ಆದರಲ್ಲಿ ಕೂಡ ವರ್ಕ್ ಲೋಡನ್ನು ನೋಡಿಕೊಂಡು ಕಡಮೆ ಮಾಡಿದ್ದೇವೆ.

ಶ್ರೀ ಸಿ. ಎಸ್. ಹುರ್ಕೋಟಿ.—ಕೆಲವು ಜುಡಿಷಿಯಲ್ ಇಲಾಖೆಯಲ್ಲಿ ಕೆಲಸ ಕಡಮೆ ಇದ್ದು ನೌಕರರ ಸಂಖ್ಯೆ ಜಾಸ್ತಿ ಇರುತ್ತದೆ. ಅದನ್ನು ವಿಚಾರಮಾಡಿದ್ದೀರಾ ?

Sri B. D. JATTI.—Whatever we want to do there, we will do it in consultation with the High Court.

ಶ್ರೀ ಜೆ. ದೇವಯ್ಯ.—ಮೊದಲು ಸರ್ಕಾರಿ ಅಧಿಕಾರಿಗಳಿಗೆ ವರ್ಗವಾದಾಗ, ಟಿ. ಎ. ಮತ್ತು ಡಿ. ಎ. ಕೊಡುತ್ತಿದ್ದರು, ಈಗ ಅವರಿಗೆ ಜೀಪ್, ಪೆಟ್ರೋಲ್ ಇವುಗಳನ್ನೆಲ್ಲ ಸರ್ಕಾರದಿಂದಲೇ ಒದಗಿಸುತ್ತಿರುವುದರಿಂದ ಈ ಎರಡರಲ್ಲಿ ಯಾವುದರಿಂದ ಹೆಚ್ಚು ಉಳಿತಾಯವಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರಿ ಜೀಪಿನಲ್ಲಿ ಪ್ರಯಾಣಮಾಡಿದರೆ ಅವರಿಗೆ ಟಿ. ಎ., ಡಿ. ಎ. ಯಾವುದೂ ಸಿಕ್ಕುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಿರತಕ್ಕ ಡಿವಿಜನ್ ಆಫೀಸುಗಳನ್ನು ರದ್ದುಮಾಡಲು ಸಾಧ್ಯವಿಲ್ಲವೆ ?

Sri B. D. JATTI.—I have replied to this supplementary. Perhaps the Hon'ble Member was not present at that time.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಯಾವ ಯಾವ ಇಲಾಖೆಗೆಷ್ಟು ಸಿಬ್ಬಂದಿವರ್ಗ ಇರಬೇಕೆಂಬ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಪ್ರಯತ್ನ ಮಾಡಲಾಗಿದೆಯೆ ?

ಶ್ರೀ ಬಿ. ಡಿ. ಜತ್ತಿ.—ಮಾಡಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರಿ ಕಛೇರಿಗಳಿಗೆ ಬಾಡಿಗೆ ಫರ್ನೀಚರುಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ಆ ಇಲಾಖೆಗಳಿಗೆ ಖಾಯಂ ಆಗಿ ಒದಗಿಸಲು ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಆ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಮದ್ರಾಸ್ ಪತ್ತು ಪಂಜಾಬ್ ಎರಡು ಸರ್ಕಾರಗಳಲ್ಲಿ ಮಂತ್ರಿಗಳ ಸಂಖ್ಯೆ ಕಡಮೆ ಯಿರುವುದರಿಂದ ಖರ್ಚು ಸಹಾ ಕಡಮೆ ಇರುತ್ತದೆ. ಇಲ್ಲಿಯೂ ಕೂಡ ಹಾಗೇ ಮಂತ್ರಿಗಳ ಸಂಖ್ಯೆಯನ್ನು ಕಡಮೆ ಮಾಡಲು ಕಾರ್ಯಕ್ರಮ ಕೈಗೊಂಡಿದ್ದಾರೆಯೆ ?

ಶ್ರೀ ಬಿ. ಡಿ. ಜತ್ತಿ.—ನಮಗೆ ತಕ್ಕಂತೆ ನಾವು ಇಲ್ಲ ನಮ್ಮ ಸರ್ಕಾರವನ್ನು ರಚನೆ ಮಾಡಿಕೊಂಡಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಮಂತ್ರಿಗಳಿಗೂ ದಿನ ಒಂದಕ್ಕೆ ಎಷ್ಟು ಫೈಲುಗಳು ಬರುತ್ತವೆ ಎಂಬುದನ್ನು ತಿಳಿಸಲು ಸಾಧ್ಯವಿದೆಯೆ ?

ಶ್ರೀ ಬಿ. ಡಿ. ಜತ್ತಿ.—ಆ ಲೆಕ್ಕವೆಲ್ಲ ಇದೆ. ಆದರೆ ಮಂತ್ರಿಗಳು ಕೇವಲ ಫೈಲುಗಳನ್ನು ಮಾತ್ರ ನೋಡುತ್ತಾರೆಂದು ಭಾವಿಸಿದ್ದರೆ ಅದು ತಪ್ಪು.

ಶ್ರೀ ಇ. ನಾರಾಯಣ ಗೌಡ.—ಸರ್ಕಾರಿ ಅಧಿಕಾರಿಗಳ ಸಂಖ್ಯೆಯಲ್ಲಿ ಶೇಕಡ ಹತ್ತರಷ್ಟನ್ನು ಕಡಮೆಮಾಡಲಾಗಿದೆ ಎಂದು ಹೇಳುತ್ತಿರುವಾಗ ಉಪಮಂತ್ರಿಗಳ ಸಂಬಳ ತಿಂಗಳಿಗೆ 500 ರೂಪಾಯಿಗಳಿದ್ದರೆ, ಅವರ ಮನೆ ಬಾಡಿಗೇ ಸಹಾ ತಿಂಗಳಿಗೆ 500 ರೂಪಾಯಿಗಳಿರುವುದು ಯಾವ ಧರ್ಮ ?

ಶ್ರೀ ಬಿ. ಡಿ. ಜತ್ತಿ.—ನಾವು ಎನೇ ಮಾಡಿದ್ದರೂ ಅದನ್ನು ಕಾನೂನು ಪ್ರಕಾರ ಮಾಡಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಈ ಅಭಾವ ಪರಿಸ್ಥಿತಿಯಲ್ಲಿ ಯಾವ ಒಬ್ಬ ಸರ್ಕಾರಿ ಅಧಿಕಾರಿಗಾಗಲೀ ತಿಂಗಳಿಗೆ 500 ರೂಪಾಯಿಗಳಿಗಿಂತ ಹೆಚ್ಚು ಸಂಬಳ ಇರಬಾರದೆಂಬ ಅಂತ ಸರ್ಕಾರದವರ ಪರಿಶೀಲನೆಯಲ್ಲೇನಾದರೂ ಇದೆಯೆ ?

ಶ್ರೀ ಬಿ. ಡಿ. ಜತ್ತಿ.—ಅಂಥ ವಿಚಾರ ಯಾವುದೂ ಸರ್ಕಾರದ ಮುಂದೆ ಇರುವುದಿಲ್ಲ.

Supply of Small Tractors to Middle Class Ryots on Hire-Purchase Basis System.

* *Q.*—838. Sri V. MASIYAPPA (Hiriyur).—

Will the Government be pleased to state :—

(*a*) whether there is any proposal to import small tractors to be supplied to the middle class ryots on hire-purchase system ;

(SRI V. MASIYAPPA)

(*b*) if so, from which country and the number of tractors to be imported ;

(*c*) what action has been taken so far in this matter ?

A.—Sri H. C. BORAIAH (Parliamentary Secretary to Minister for Agriculture).—

(*a*) No.
(*b*) Does not arise in view of reply to (*a*).
(*c*) Do do

Sri V. MASIYAPPA.—Has it come to the notice of the Government that inside the House and outside the House it has been brought to the notice of the Government that raiyats are in need of this kind of a small tractor and it should be supplied to them on hire purchase system.

ಶ್ರೀ ಹೆಚ್. ಸಿ. ಬೋರಯ್ಯ.—ಹಾಗಾದು. ಬಂದಿದೆ.

Sri V. MASIYAPPA.—What action Government have taken in this matter.

ಶ್ರೀ ಹೆಚ್. ಸಿ. ಬೋರಯ್ಯ.—ಈ ಬಗ್ಗೆ ನರಕಾರದವರು ಕೇಂದ್ರ ನರಕಾರಕ್ಕೆ 25 ಟ್ರಾ್ಯಕ್ಟರು ಗಳನ್ನು ಜಪಾನಿನಿಂದ ತರಿಸಿ ಕೊಡಿ ನಮಗೆ ಡೆಮಾ್ಸ್ಟ್ರೇಷನ್ ಕೆಲನಗಳಿಗಾಗಿ ಬೇಕಾಗುತ್ತದೆ ಎಂದು ಕೇಳಲಾಗಿತ್ತು. ಉಸ್ಮಾನ್ ಇಂಜನೀಯರಿಂಗ್ ಕಂಪೆನಿಯವರು 1,000 ಪವರು ಟಿಲ್ಲರ್ಸ್ ಎನ್ನುವುದನ್ನು ತರಿನುತ್ತೇವೆ. ಇದಕ್ಕಾಗಿ ರೈನನ್ನು ಕೊಡಿಸಿಕೊಡಿ ಎಂದು ಮನವಿಮಾಡಿ ಕೊಂಡಿದ್ದಾರೆ.

Sri V. MASIYAPPA.—What is the reply from the Government of India ? Are they likely to supply them early or do that take a long time ?

ಶ್ರೀ ಎಚ್. ಸಿ. ಬೋರಯ್ಯ.— ಉತ್ತರ ನಿರೀಕ್ಷಿಸುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾನ್ತಿ ಗೌಡ. —ಬೇರೆ ರಾಷ್ಟ್ರಗಳಿಂದ ಸಹಾಯ ಪಡೆಯುವುದಕ್ಕಿಂತ ನಮ್ಮ ದೇಶದಲ್ಲೇ ಸಣ್ಣ ಟ್ರಾ್ಯಕ್ಟರುಗಳ ಉತ್ಪತ್ತಿ ಮಾಡುವ ಯೋಜನೆ ನರಕಾರಕ್ಕೇನಾದರೂ ಇದೆಯೇ ?

ಶ್ರೀ ಎಚ್. ಸಿ. ಬೋರಯ್ಯ.— ನಮ್ಮ ಇಲಾಖೆಯವರೇ ಒಂದು 'ಕ್ಯಾಕೇವ್' ಎನ್ನುವುದನ್ನು ತಯಾರು ಮಾಡಿದ್ದಾರೆ ಎನ್ನುವುದು ನರಕಾರದ ಗಮನಕ್ಕೆ ಬಂದಿದೆ. ಇನ್ನೂ ಇದು ಪ್ರಾಯೋಗಿಕಾ ವಸ್ಥೆಯಲ್ಲಿಯೇ ಇರುವುದರಿಂದ ಇದನ್ನು ಉತ್ತಮಪಡಿಸುವುದಕ್ಕೆ ಮುಂಜೆ ಇದರ ಕೆಲನ ಇತ್ಯಾದಿ ಗಳನ್ನು ನೋಡಿಕೊಂಡು ಮುಂದೆ ಯೋಜನೆ ಮಾಡಬೇಕಾಗಿದೆ.

ಶ್ರೀ ಕೆ. ಎ. ಬೈರೇಗೌಡ.—ಖಾನಗಿಯವರಿಂದಲಾಗಲಿ ಅಥವಾ ಬೇರೆಯವರಿಂದಲಾಗಲೀ ಸಣ್ಣ ಟ್ರಾ್ಯಕ್ಟರುಗಳಿಗೆ ಅರ್ಜಿಗಳೇನಾದರೂ ಬಂದಿವೆಯೇ.

ಶ್ರೀ ಎಚ್. ಸಿ. ಬೋರಯ್ಯ.—ಅಂತಹ ಅರ್ಜಿಗಳು ಬಂದಿಲ್ಲ.

ಶ್ರೀ ಕೆ. ಎನ್. ಸೂರ್ಯನಾರಾಯಣ ರಾವ್.—ಕೇಂದ್ರ ನರಕಾರದಿಂದ ಪವರ್ ಟಿಲ್ಲರ್ಸ್ ತರಿನುತ್ತೇವೆಂದು ಹೇಳಿದಿರಿ. ಇದನ್ನು ನರಕಾರದ ರೆಕ್ಕದಲ್ಲಿ ತರಿನುತ್ತೀರಾ ಇಲ್ಲವೇ ಪ್ರೈವೇಟ್ ಏಜನ್ಸಿ ಮೂಲಕ ತರಿನುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಖಾನಗಿಯವರು ಅರ್ಜಿ ಕಳುಹಿಸಿದ್ದಾರೆ. ಅದನ್ನು ನೋಡಿ ಶಿಫಾರನು ಮಾಡಬೇಕಾಗಿದೆ.

ಶ್ರೀ ಎನ್. ಹುಚ್ಚಮಾನ್ತಿ ಗೌಡ.—ಕೆ. ಜಿ. ಎಫ್.ನಲ್ಲಿ ಒಂದು ಟ್ರಾ್ಯಕ್ಟರು ಯೋಜನೆ ಆರಂಭ ಮಾಡಬೇಕೆಂದಿರುವ ವ್ಯವಸ್ಥೆಯಲ್ಲಯೇ ಇಂತಹ ಟ್ರಾ್ಯಕ್ಟರುಗಳನ್ನೂ ತಯಾರು ಮಾಡುವುದಕ್ಕೆ ನಾಧ್ಯವೇ ?

ಶ್ರೀ ಎಚ್. ಸಿ. ಬೋರಯ್ಯ.—ಈ ಬಗ್ಗೆ ಎವರಗಳು ನನ್ನ ಮುಂದೆ ಇಲ್ಲ.

ಶ್ರೀ ಎಸ್. ಎ. ರಾಮೇಗೌಡ.—ರೈತರಿಗೆ ಟ್ರ್ಯಾಕ್ಟರುಗಳನ್ನು ಸುಲಭ ಬೆಲೆಗೆ ಕೊಡುವಾಗ ಸ್ವೀರು ಪಾರ್ಟುಗಳು ಸಲೀಸಾಗಿ ಸಿಗುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಂತಹ ಅಕ್ಷೇಪಣೆಗಳು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈಚೆಗೆ ಮಾನ್ಯ ಕೈಗಾರಿಕೆ ಮಂತ್ರಿಗಳು ಜಪಾನಿಗೆ ಹೋಗಿದ್ದಾಗ ಇಂತಹ ಟ್ರ್ಯಾಕ್ಟರನ್ನು ಪರಿಶೀಲಿಸಿ ತರಲು ಸಾಧ್ಯ ಇದೆ ಇದನ್ನು ತರಿಸಲು ಏರ್ಪಾಡು ಮಾಡುತ್ತೇವೆ ಎಂದು ಹೇಳಿದುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ.

ಶ್ರೀ ಐ. ನಾರಾಯಣ ಗೌಡ.—ಹೆಚ್ಚಿನ ಆಹಾರ ಬೆಳೆಯುವುದಕ್ಕಾಗಿ ಪಂಪುಸೆಟ್ಟುಗಳನ್ನು ಯಾವ ರೀತಿಯಾಗಿ ಕೊಡುತ್ತಿದ್ದೀರೋ ಅದರಂತೆ ಟ್ರ್ಯಾಕ್ಟರುಗಳನ್ನು ಸರಕಾರ ಖರೀದಿ ಮಾಡಿ ರೈತರಿಗೆ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಇದರೊಳಗೆ ದೊಡ್ಡ ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವ ರೈತರು ಸ್ವಲ್ಪ ದುಡ್ಡಿರುವವರು ಮತ್ತು ಹೆಚ್ಚು ಜಮೀನಿರುವವರು, ಈಗ ಪ್ರಶ್ನೆ ಇರುವುದು ಚಿಕ್ಕ ಟ್ರ್ಯಾಕ್ಟರುಗಳ ವಿಷಯ. ಇದನ್ನು ಇನ್ನೂ ಇಲ್ಲಿ ತಯಾರು ಮಾಡುತ್ತಿಲ್ಲ. ಮುಂದೆ ತಯಾರಾದ ಮೇಲೆ ಇದನ್ನು ಸಾಲದ ರೂಪವಾಗಿ ಕೊಡುವಾಗ ಈ ನಲಹೆಯನ್ನು ಯೋಚನೆ ಮಾಡಲು ಸರ್ಕಾರದ ಮುಂದೆ ಇಟ್ಟುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಸಣ್ಣ ಟ್ರ್ಯಾಕ್ಟರುಗಳ ಬೆಲೆ ಏನಾಗಬಹುದು ?

ಶ್ರೀ ಎಚ್. ಸಿ. ಬೋರಯ್ಯ.—ತಯಾರು ಮಾಡಲು ಉದ್ದೇಶಿಸಿರುವ ಸಣ್ಣ ಟ್ರ್ಯಾಕ್ಟರಿನ ಬೆಲೆ ಸುಮಾರು 4,000ದಷ್ಟಾಗುತ್ತದೆ.

ಶ್ರೀ ಎಂ. ಆರ್. ಪಾಟೀಲ್.—ಎಷ್ಟು ಹಾರ್ಸ್ ಪವರಿನದು ?

ಶ್ರೀ ಎಚ್. ಸಿ. ಬೋರಯ್ಯ.—ಆರು ಹಾರ್ಸ್ ಪವರಿನದು.

ಶ್ರೀ ಎಂ. ಆರ್. ಪಾಟೀಲ್.—ಆರು ಹಾರ್ಸ್ ಪವರು ಟ್ರ್ಯಾಕ್ಟರುಗಳು ನಮ್ಮ ದೇಶದ ರೈತರಿಗೆ ಅನುಕೂಲವಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇವನ್ನೆಲ್ಲಾ ಚೆಸ್ಸು ಮಾಡಿದ ಮೇಲೆ ಇದನ್ನು ಕಮರ್ಷಿಯಲ್ ಲೈನಿನ ಮೇಲೆ ಹಾಕುವ ಯೋಚನೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ದೊಡ್ಡ ಟ್ರ್ಯಾಕ್ಟರುಗಳನ್ನು ಮಾಡುವುದರಿಂದ ವ್ಯವಸಾಯಗಾರರಿಗೆ ಹೆಚ್ಚು ಖರ್ಚಾಗುತ್ತದೆ ಎನ್ನುವುದನ್ನು ಸರಕಾರ ಗಮನದಲ್ಲಿಟ್ಟುಕೊಂಡು ಸಣ್ಣ ಟ್ರ್ಯಾಕ್ಟರುಗಳನ್ನು ಆದಷ್ಟು ಬೇಗ ಒದಗಿಸತಕ್ಕ ನೀತಿಯನ್ನು ನಿರ್ದಿಷ್ಟವಾಗಿ ಏನಾದರೂ ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದರೆ ಚಿಕ್ಕ ಟ್ರ್ಯಾಕ್ಟರುಗಳನ್ನು ಹೊರಗಡೆಯಿಂದ ತರಿಸಿದರೆ ಅದರ ಖರೀದಿ ಏನಾಗುತ್ತದೆ ಮತ್ತು ಇಲ್ಲೇ ಮಾಡಿದರೆ ಏನಾಗುತ್ತದೆ ಎನ್ನುವುದನ್ನೆಲ್ಲಾ ನೋಡಿ ಈ ವಿಷಯವನ್ನು ಆಲೋಚನೆ ಮಾಡಬೇಕಾಗಿದೆ.

Levy of Penal Interest on the Arrears of loan given to Agriculturists for Purchase of Tractors.

*Q.—865. Sri S. V. RAME GOWDA (Malur).—

Will the Government be pleased to state :—

(*a*) whether it is a fact that penal interest is being levied by them on the arrears of loan given to the agriculturists for purchase of tractors ;

(*b*) if so, whether they intend to cancel the present system of levying penal interest and issue orders to levy only simple interest on the arrears ?